# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ದಿನಾಂಕ:18.07.2026

ಸಂಖ್ಯೆ:ತುವಿ:ಶೈವಿ:2026-27: 1382

## ನೆನಪೋಲೆ

ವಿಷಯ:- ವಿವಿಧ ಸ್ನಾತಕ ಪದವಿ ಕೋರ್ಸುಗಳ ಪಠ್ಯಕ್ರಮವನ್ನು ರಚಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:-1) ವಿವಿ ಅಧಿಸೂಚನೆ ಪತ್ರ ಸಂಖ್ಯೆ:ತುವಿ:ಶೈವಿ:2026-27/395 ದಿನಾಂಕ:29.04.2026.
2) ವಿವಿ ಅಧಿಸೂಚನೆ ಪತ್ರ ಸಂಖ್ಯೆ:ತುವಿ:ಶೈವಿ:2026-27/396 ದಿನಾಂಕ:29.04.2026.
3) ಕಛೇರಿ ಪತ್ರ ಸಂಖ್ಯೆ:ತುವಿ:ಶೈವಿ:2026-27/397 ದಿನಾಂಕ:30.04.2026
4) ನೆನಪೋಲೆ ಸಂಖ್ಯೆ:ತುವಿ:ಶೈವಿ:2026-27/591 ದಿನಾಂಕ:21.05.2026.
5) ನೆನಪೋಲೆ ಸಂಖ್ಯೆ:ತುವಿ:ಶೈವಿ:2026-27/1331 ದಿನಾಂಕ:14.07.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01) ಮತ್ತು (02)ರ ಅಧಿಸೂಚನೆಗಳನ್ವಯ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರೋಗ್ರಾಂ ವಿನ್ಯಾಸವನ್ನು ಅಧಿಸೂಚಿಸಲಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಗಳು ಸದರಿ ಪ್ರೋಗ್ರಾಂ ವಿನ್ಯಾಸಗಳನ್ನು ಪರಿಶೀಲಿಸಿ ಸಭೆಯನ್ನು ನಡೆಸಿ 2026-27ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 5 ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ರಚಿಸಿ **ದಿನಾಂಕ:20.05.2026 ಬುಧವಾರದ ಒಳಗೆ** ದೃಢೀಕೃತ ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಉಲ್ಲೇಖ (04) ರ ಪತ್ರದಲ್ಲಿ ತಿಳಿಸಲಾಗಿತ್ತು.

ಆದರೆ ಇದುವರೆವಿಗೂ ಸ್ನಾತಕ ವಿಷಯಗಳಾದ ಭೌತಶಾಸ್ತ್ರ, ಪ್ರಾಣಿಶಾಸ್ತ್ರ, ಜೈವಿಕತಂತ್ರಜ್ಞಾನ, ಭೂಗೋಳಶಾಸ್ತ್ರ, ಪತ್ರಿಕೋದ್ಯಮ, ಬಿಕಾಂ(ಗಣಕವಿಜ್ಞಾನ), ಬಿವಿಎ, ವಿಭಾಗಗಳ ಅಧ್ಯಯನ ಮಂಡಳಿಗಳು ಪಠ್ಯಕ್ರಮಗಳನ್ನು ಸಲ್ಲಿಸಿರುವುದಿಲ್ಲ. 2026-27 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಂತೆ ವಿವಿಧ ಸ್ನಾತಕ ಪದವಿ ತರಗತಿಗಳು ದಿನಾಂಕ:01.08.2026 ರಿಂದ ಪ್ರಾರಂಭವಾಗುತ್ತಿರುವುರಿಂದ ಪಠ್ಯಕ್ರಮಗಳನ್ನು ರಚಿಸಿ ತುರ್ತಾಗಿ ದೃಢೀಕೃತ ಪ್ರತಿಯನ್ನು **ದಿನಾಂಕ:18.07.2026**ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಉಲ್ಲೇಖ (05)ರಲ್ಲಿ ತಿಳಿಸಲಾಗಿತ್ತು.

ಆದರೆ ಇದುವರೆವಿಗೂ ಮೇಲ್ಕಂಡ ವಿಷಯಗಳ ಅಧ್ಯಯನ ಮಂಡಳಿಗಳ ಅಧ್ಯಕ್ಷರು ಪಠ್ಯಕ್ರಮಗಳನ್ನು ಸಲ್ಲಿಸಿರುವುದಿಲ್ಲ. ದಿನಾಂಕ:01.08.2026ರಿಂದ ತರಗತಿಗಳು ಪ್ರಾರಂಭವಾಗುತ್ತಿರುವುದರಿಂದ ದಿನಾಂಕ:22.07.2026ರೊಳಗಾಗಿ 5ನೇ ಮತ್ತು 6ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಒಂದು ವೇಳೆ ಸಲ್ಲಿಸದಿದ್ದಲ್ಲಿ ವಿಭಾಗದ ಪಠ್ಯಕ್ರಮಗಳನ್ನು ಬೋಧನೆಗೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಯಾ ಮಂಡಳಿಗಳ ಅಧ್ಯಕ್ಷರುಗಳು ನೇರವಾಗಿ ಜವಾಬ್ದಾರರಾಗಿರುತ್ತಾರೆ. (Soft copy & Signed Scan copy ಯನ್ನು dracademictut@gmail.com ಗೆ ಇ-ಮೇಲ್ ಕಳುಹಿಸುವುದು)

ಆದೇಶದ ಮೇರೆಗೆ

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ

1. ಅಧ್ಯಕ್ಷರು ಮತ್ತು ಸಂಚಾಲಕರುಗಳು, ಭೌತಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕತಂತ್ರಜ್ಞಾನ, ಭೂಗೋಳಶಾಸ್ತ್ರ, ಪತ್ರಿಕೋದ್ಯಮ, ಬಿಬಿಎ, ಬಿಕಾಂ(ಗಣಕವಿಜ್ಞಾನ), ಬಿವಿಎ, ವಿಷಯಗಳ ಸ್ನಾತಕ ಅಧ್ಯಯನ ಮಂಡಳಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಎಲ್ಲಾ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸುತ್ತೋಲೆಯನ್ನು ಇ-ಮೇಲ್ ಮುಖಾಂತರ ಕಳುಹಿಸುವುದು.

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಛೇರಿ ಪ್ರತಿ.